ಸ್ಟೇಷನ್‌ನ ದೂರವಾಣಿಯನ್ನು ಉಪಯೋಗಿಸಿಕೊಂಡು ಬೇರೆ ರಾಜಕೀಯವಾದಂತಹ ಒತ್ತಡವನ್ನು ತಂದು ತಮ್ಮನ್ನು ಹೊರಗಡೆ ಬಿಡಿ ಎಂದು ಹೇಳಿಸುತ್ತಿದ್ದರು. ಆಗ ನೇರವಾಗಿ ಪ್ರತಿಭಟನೆ ಮಾಡಿದಂತಹ ಸಂದರ್ಭದಲ್ಲಿ ಫೋನ್‌ನ್ನು ಕಿತ್ತುಕೊಳ್ಳಲಾಯಿತು. ಮಾನ್ಯ ಮುಖ್ಯಮಂತ್ರಿಗಳೇ ಆನಂತರದಲ್ಲಿ ಕೇಸನ್ನು ರಿಜಿಸ್ಟರ್ ಮಾಡಿಕೊಂಡರು. ಯಾರು ಆರೋಪಿಯನ್ನು ಅರೆಸ್ಟ್ ಮಾಡಿಕೊಂಡು ಬಂದಿದ್ದರಲ್ಲಾ, ಠಾಣೆಯಲ್ಲಿ ಎಲ್ಲರೂ ಇದ್ದಂತಹ ಸಂದರ್ಭದಲ್ಲಿ ಅವನು ಪರಾರಿಯಾಗಿದ್ದಾನೆಂದು ಘೋಷಣೆ ಮಾಡಿದ್ದಾರೆ. ಈ ಕ್ಷಣದವರೆವಿಗೂ ಕೂಡ ಮಂಜುನಾಥನನ್ನು ಸ್ಟೇಷನ್‌ಗೆ ಕರೆದುಕೊಂಡು ಬಂದವರು ಆತ ಪರಾರಿಯಾಗಿದ್ದಾನೆ ಎನ್ನುವಂತಹ ವಿಚಾರವನ್ನು ಹೇಳುತ್ತಾರೆ. ಇಲ್ಲಿ ಪ್ರಮುಖವಾಗಿ ವಿಶೇಷವಾಗಿ ನಾನು ಆಗಲೇ ಹೇಳಿದಹಾಗೆ ಒಳ್ಳೆಯ ಪೊಲೀಸ್ ಅಧಿಕಾರಿಯನ್ನು ಅಲ್ಲಿಗೆ ಹಾಕಿದ್ದೀರಿ. ಅಲ್ಲಿ ಸ್ಥಳೀಯ ಅಧಿಕಾರಿಗಳು ಯಾರು ಇದ್ದಾರೆ ಅವರು ಇವತ್ತು ದಿನೇದಿನೇ ಸ್ಪಂದನೆ ಮಾಡದೆ ಇರುವಂತಹ ಕೆಲಸಗಳಾಗಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ ಎನ್ನುವಂತಹದ್ದನ್ನು ಹೇಳಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಆಗಿರುವುದು ತಪ್ಪು ಎಂದು ಜಿಲ್ಲಾ ಮಂತ್ರಿಗಳು ಈಗಾಗಲೇ ಇದರ ಬಗ್ಗೆ ವರದಿಯನ್ನು ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರ ಏನು ಕ್ರಮಗಳನ್ನು ತೆಗೆದುಕೊಂಡಿದೆ, ಎನ್ನುವಂತಹ ವಿಚಾರಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೋ-ಆಪರೇಟೀವ್ ಸಿಬ್ಬಂದಿ ಎಂದು ಹೇಳಿದರು, ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕೊಡಬೇಕೋ ಅಥವಾ ನಾನೇ ಉತ್ತರವನ್ನು ಕೊಡಬೇಕೋ ಎಂಬುದನ್ನು ನೋಡಿ ನಾನೇ ಉತ್ತರವನ್ನು ಕೊಡಬೇಕಾದರೆ ತರಿಸಿಕೊಡುತ್ತೇನೆ.

ಅಧ್ಯಕ್ಷರು :- ಮಾನ್ಯ ಸಚಿವರು ಉತ್ತರವನ್ನು ತರಿಸಿಕೊಡುತ್ತೇನೆಂದು ಹೇಳಿದ್ದಾರೆ. ಮಾನ್ಯ ರಾಮದಾಸ್‌ರವರೆ, ಇಲ್ಲಿ ಏನಾಗಿದೆ ಎಂದರೆ, 10-45ಕ್ಕೆ ತಾವು ನೋಟೀಸ್ ಕೊಟ್ಟು ತಕ್ಷಣ 1-00 ಗಂಟೆಗೆ ಹೇಗೆ ಉತ್ತರವನ್ನು ಕೊಡಿಸುವುದಕ್ಕಾಗುತ್ತದೆ?. ನೀವೇ ಹೇಳಿ ?

ಊ) ಕಡೂರಿನಲ್ಲಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ನಡೆದ ಅವ್ಯವಹಾರ

+ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಕಡೂರು):- ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಸಾರ್, ಕಳೆದ ವಾರ ನನ್ನ ಕ್ಷೇತ್ರದಲ್ಲಿ ಒಂದು ಘಟನೆ ನಡೆದಿದೆ, ಸುಮಾರು ಒಂದು ತಿಂಗಳಿನಿಂದ "ಕೂಲಿಗಾಗಿ ಕಾಳು" ಯೋಜನೆಯಲ್ಲಿ ಅವ್ಯವಹಾರವಾಗುತ್ತಿದೆ, ಅದನ್ನು ಕಡೂರಿನ ಕೇಂದ್ರಸ್ಥಾನದಲ್ಲಿ ಮಾರುತ್ತಿದ್ದಾರೆ, ಅದನ್ನು ಹಳ್ಳಿಗಳಿಗೆ ಹೋಗಿ ಕೊಡುತ್ತಿಲ್ಲ ಎಂದು ಬಹಳಷ್ಟು ಜನ ಪಬ್ಲಿಕ್ ಅಜಿಟೇಷನ್ ಮಾಡಿದರೂ ಸಹಿತ ತಾಲ್ಲೂಕು ಹಾಗೂ ಜಿಲ್ಲಾ ಅಧಿಕಾರಿಗಳು ಇದರ ಬಗ್ಗೆ ಗಮನವನ್ನು ಹರಿಸಿಲ್ಲ. ಅಲ್ಲಿ ಸುಮಾರು 19 ಕ್ವಿಂಟಾಲ್ ಅಕ್ಕಿಯನ್ನು ತೆಗೆದುಕೊಂಡು ಹೋಗಿ ಅಂಗಡಿಯಲ್ಲಿ ಮಾರುತ್ತಿರುವುದನ್ನು ಕಡೂರಿನ ಸರ್ಕಲ್ ಇನ್ಸ್‌ಪೆಕ್ಟರ್‌ರವರನ್ನು ಕರೆದುಕೊಂಡು ಹೋಗಿ ಜೋಡಿ ಓಬಹಳ್ಳಿ ಗ್ರಾಮಪಂಚಾಯಿತಿಯಲ್ಲಿರತಕ್ಕಂತಹ ಅವ್ಯಹಾರವನ್ನು ಅಲ್ಲಿನ ಜನರೇ ಹಿಡಿದಿದ್ದಾರೆ. ಈಗ ಅದರ ಬಗ್ಗೆ ಎಫ್‌ಐಆರ್ ಆಗಿದೆ, 19 ಕ್ವಿಂಟಾಲ್ ಅಕ್ಕಿಯನ್ನು ರಿಕವರಿ ಮಾಡಿದ್ದಾರೆ. 22-03-2003 ರಂದು ಎಫ್‌ಐಆರ್ ಆಗಿದೆ. ಆ ರೀತಿ ಎಫ್‌ಐಆರ್ ಆದರೂ ಸಹಿತ, ನಾನು ಜಿಲ್ಲಾ ಹಾಗೂ ತಾಲ್ಲೂಕು ಅಧಿಕಾರಿಗಳಿಗೆ ಹೇಳಿದರೂ

ಸಹಿತ ಯಾರೂ ಸಹ ಗಮನವನ್ನು ತೆಗೆದುಕೊಳ್ಳುತ್ತಿಲ್ಲ. ಈಗ ಆ ಕೇಸ್‌ಗೆ ಸಂಬಂಧಪಟ್ಟ ಹಾಗೆ 'ಬಿ' ರಿಪೋರ್ಟ್ ಹಾಕುವ ಸಂಬಂಧದಲ್ಲಿ ಪ್ರಯತ್ನಗಳು ನಡೆಯುತ್ತಿದೆ. ಇವತ್ತು ನಮಗೆ ಬಂದಿರತಕ್ಕಂತಹ ಮಾಹಿತಿಯ ಪ್ರಕಾರ ಯಾರ್ಯಾರು ಅಕ್ಕಿ ದುರುಪಯೋಗವಾಗುತ್ತಿರುವುದನ್ನು ತಡೆಯಲಿಕ್ಕೆ ಪ್ರಯತ್ನ ಮಾಡಿದ್ದಾರೋ ಅವರು ಮತ್ತೆ ಈಗ 'ಬಿ' ರಿಪೋರ್ಟ್ ಹಾಕಿದರೆ ಪೊಲೀಸ್ ಸ್ಟೇಷನ್ ಮುಂದೆ ಅಜಿಟೇಷನ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ದಯಮಾಡಿ ನಾನು ಇದರ ಬಗ್ಗೆ ಎಲ್ಲಾ ಅಧಿಕಾರಿಗಳ ಗಮನಕ್ಕೆ ತಂದರೂ ಸಹಿತ ನಮಗೆ ಫಲ ದೊರಕಲಿಲ್ಲವೆನ್ನುವಂತಹ ದೃಷ್ಟಿಯಿಂದ ಹೇಳುತ್ತಿದ್ದೇನೆ. ಇಲ್ಲಿ ನಮ್ಮ ಜಿಲ್ಲಾ ಸಚಿವರು ಇದ್ದಾರೆ, ತಕ್ಷಣ ಆ ಬಗ್ಗೆ ಆದೇಶವನ್ನು ಕೊಟ್ಟು ಯಾರ್ಯಾರು ದುರುಪಯೋಗದಲ್ಲಿ ಭಾಗಿಯಾಗಿದ್ದಾರೆ ಆ ಅಧಿಕಾರಿಗಳನ್ನು ಅಮಾನತ್ತಿನಲ್ಲಿಟ್ಟು ತನಿಖೆ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಇದನ್ನು ಯಾವ ಫಾರ್ಮೆಟ್‌ನಲ್ಲಿ ತಂದಿದ್ದಾರೆಂದು ನನಗೆ ಗೊತ್ತಿಲ್ಲ.

ಅಧ್ಯಕ್ಷರು:- ಮಾನ್ಯ ಸದಸ್ಯರು ಇದನ್ನು ಶೂನ್ಯವೇಳೆಯಲ್ಲಿ ತಂದಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಶೂನ್ಯವೇಳೆಯಲ್ಲಿ ತಂದಿದ್ದರೆ, ನಮಗೆ ಲಿಖಿತ ರೂಪದಲ್ಲಿ ಏನಾದರೂ ಬರಬೇಕಲ್ಲವೇ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ನಾನು ಇದನ್ನು ನಿನ್ನೆಯೇ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಿಗೆ ಕಳುಹಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಅವರು ನಮಗೆ ಕಳುಹಿಸಿಕೊಟ್ಟರೆ, ಅದನ್ನು ಮಾಡೋಣ.

(ಗೊಂದಲ)

ಅಧ್ಯಕ್ಷರು:- ಏನಾಗಿದೆ ಎಂದರೆ ಮಾನ್ಯ ಸದಸ್ಯರು ಅವತ್ತೇ ಕೊಟ್ಟು ಅವತ್ತೇ ಕೇಳಿದ್ದಾರೆಂದು ತಿಳಿದುಕೊಂಡಿದ್ದಾರೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ:- ಇದನ್ನು ನಾನು ನಿನ್ನೆಯೇ ಕೊಟ್ಟಿದ್ದೆ. ನನ್ನ ಅಪೇಕ್ಷೆ ಇಷ್ಟೆ; ಸಚಿವರು ಅದರ ಬಗ್ಗೆ ಗಮನಹರಿಸಿ ತನಿಖೆ ಮಾಡಿದರೆ ಸಾಕು. ಜನ ಸುಮ್ಮನಾಗುತ್ತಾರೆ. ದುರುಪಯೋಗವಾಗುತ್ತದೆಂದು ಸಭೆಯ ಗಮನಕ್ಕೆ ತಂದರೂ ಸರ್ಕಾರ ಕ್ರಮ ತೆಗೆದುಕೊಳ್ಳದಿದ್ದರೆ ತಪ್ಪಾಗುತ್ತದೆ.

ಅಧ್ಯಕ್ಷರು:- ಇಲ್ಲಿಗೆ ಶೂನ್ಯವೇಳೆ ಮುಗಿಯಿತು.

3. ಗಮನ ಸೆಳೆಯುವ ಸೂಚನೆ

ವಿಷಯ :- ಎನ್‌ಜಿಇಎಫ್ ಕಾರ್ಖಾನೆಯ ನೌಕರರಿಗೆ ವೇತನ ಪಾವತಿಸದಿರುವ ಬಗ್ಗೆ.

+ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ):- ಮಾನ್ಯ ಅಧ್ಯಕ್ಷರೆ, ಎನ್.ಜಿ.ಇ.ಎಫ್. ಕಾರ್ಖಾನೆಯ ನೌಕರರಿಗೆ ವೇತನ ಪಾವತಿಸದಿರುವ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:- ಮಾನ್ಯ ಸಿಂಧ್ಯಾರವರೆ, ಉತ್ತರ ಜಾಸ್ತಿ ಇದೆ It will be taken as read. ತಾವು ಕ್ಲಾರಿಫಿಕೇಷನ್ ಕೇಳಿ.